


ಗುಹೆಗಳ ಪ್ರವೇಶದ್ವಾರ





ಬೆಳಕಿನ ಹುಳುಗಳ ಬೆರಗಿನ ಲೋಕ

ಕಾರಣ ಅಯ್ಯೋ, ಬೆಳಕು ಬರುವುದೇ ಬೇಡವಾಗಿತ್ತು ಎನಿಸಿತ್ತು.

## ಬೆಳಕಿನ ಹುಳವೆಂಬ ಬೆರಗು!

ಎರಡು ರೆಕ್ಕೆಗಳ ಕೀಟ ಅರ್ಯಾಕ್ನೊಕ್ಯಾಂಪಾ ಲ್ಯುಮಿನೋಸಾ. ಅದರ ಲಾರ್ವಾ ಹಂತವೇ ಬೆಳಕಿನ ಹುಳ. ಅದು ನ್ಯೂಜಿಲೆಂಡ್‌ನಲ್ಲಿ ಮಾತ್ರ ಕಾಣಸಿಗುತ್ತದೆ. ಕತ್ತಲಿರುವ, ಒದ್ದೆಯಿರುವ, ಚಪ್ಪಟೆ ಸೂರು ಹೊಂದಿರುವ, ಬಿಸಿಲು ಗಾಳಿ ಬೀಳದ ಪ್ರದೇಶದಲ್ಲಷ್ಟೆ ಅದು ಬದುಕಲು ಸಾಧ್ಯವಿದೆ. ವೈಟಮೊ ನದಿಯ ಬಳಿ ಸಮೃದ್ಧ ಕ್ರಿಮಿಕೀಟಗಳಿರುವ ಪ್ರದೇಶದ ಕತ್ತಲ ಗುಹೆಗಳು ಅವಕ್ಕೆ ಅತ್ಯಂತ ಸೂಕ್ತ ವಾಸಸ್ಥಾನವಾಗಿವೆ.

ಒಟ್ಟೂ 11 ತಿಂಗಳ ಜೀವಿತ ಕಾಲಾವಧಿಯ ಕೀಟದ ಅಮ್ಮನು ಸುಮಾರು 100–120 ಮೊಟ್ಟೆಗಳನ್ನು ಸೂರಿನಲ್ಲಿ ಒಂದರ ಪಕ್ಕ ಒಂದು ಇಟ್ಟು ಸಾಯುತ್ತದೆ. ಇಪ್ಪತ್ತು ದಿನಗಳಲ್ಲಿ ಮೊಟ್ಟೆಯೊಡೆದು ಹೊರಬರುವ 3 ಮಿ.ಮೀ. ಉದ್ದದ ಪುಟ್ಟ ಲಾರ್ವಾಗಳು ಚದುರುತ್ತವೆ. ಜಿಗುಟು ಅಂಟಿನ ಎಳೆಗಳನ್ನು ವಾಂತಿ ಮಾಡಿ (ಅದು ತ್ಯಾಜ್ಯವೂ ಹೌದಂತೆ!), ಇಳಿಬಿಟ್ಟು, ಬಳಿಕ ಬೆಳಕು ಸೂಸಲು ಶುರು ಮಾಡುತ್ತವೆ. ಜೋತಾಡುವ ಬೆಳಕಿನ ಎಳೆಗಳನ್ನು ತಯಾರಿಸುವುದೇಕೆ? ತನ್ನ ಆಹಾರವಾಗಿ ಕ್ರಿಮಿಕೀಟಗಳ ಆಕರ್ಷಿಸಲು, ತನ್ನ ದೇಹ ಹೊರಸೂಸುವ ತ್ಯಾಜ್ಯಗಳ 'ಉರಿ'ಸಲು, ಉಳಿದವರು ಬೆಳಕಿಗೆ ಹೆದರಿ ತನ್ನ ತಿನ್ನದಂತೆ ರಕ್ಷಿಸಿಕೊಳ್ಳಲು, ಬೆಳಕಿಗೆ ಆಕರ್ಷಿತರಾದವರು ತನ್ನ ಬಾಯಿಗೆ ಬಂದು ಬೀಳಲು!

## ಎಲ ಎಲಾ ಹುಳವೇ!

ಒಂಬತ್ತು ತಿಂಗಳ ತನಕ ಬೆಂಕಿಕಡ್ಡಿಯಷ್ಟು ಉದ್ದ ಬೆಳೆಯುವ ಬೆಳಕಿನ ಹುಳದ ದೇಹದ ಕೊನೆಯ ಭಾಗ ರಾಸಾಯನಿಕಗಳನ್ನು ಹೊರಸೂಸುತ್ತದೆ. ಅವು ಗಾಳಿಯಲ್ಲಿರುವ ಆಮ್ಲಜನಕದ ಸಂಪರ್ಕಕ್ಕೆ ಬಂದಾಗ ಬೆಳಕು ಬೀರುತ್ತವೆ. ಪುಟ್ಟ ಹುಳವು ಆಮ್ಲಜನಕದ ಪೂರೈಕೆ ಹೆಚ್ಚು ಕಡಿಮೆ ಮಾಡುವ ಮೂಲಕ ಬೆಳಕನ್ನು ಹೆಚ್ಚುಕಡಿಮೆ ಮಾಡಿಕೊಳ್ಳುತ್ತದೆ. ಜಿಗುಟು ಅಂಟಿನ ಎಳೆಗೆ ಸಿಕ್ಕಿದ ಕ್ರಿಮಿಕೀಟಗಳನ್ನು ಬಾಯಿಗೆಳೆದುಕೊಳ್ಳುತ್ತದೆ.

ನಂತರ ತನ್ನ ಸುತ್ತ ಕೋಶ ನೇಯ್ದುಕೊಂಡು ಸೂರಿಗೆ ಇಳಿಬಿದ್ದು 13 ದಿನಗಳಲ್ಲಿ ಪ್ರೌಢ ಕೀಟವಾಗಿ ಹೊರಬರುತ್ತದೆ. ಕೀಟವು ನೋಡಲು ದೊಡ್ಡ ಸೊಳ್ಳೆಯಷ್ಟಿರುತ್ತದೆ. ಅದಕ್ಕೆ ಬಾಯಿರುವುದಿಲ್ಲ, ಜೀರ್ಣಾಂಗವ್ಯೂಹವಿರುವುದಿಲ್ಲ. ಉಂಡು ತಿನ್ನುವ ಕೆಲಸವೇ ಇಲ್ಲ. ವಂಶಾಭಿವೃದ್ಧಿಯೊಂದೇ ಗುರಿ. ಗಂಡುಕೀಟ ಕೋಶಗಳ ಬಳಿಯೇ ಸುಳಿದಾಡುತ್ತ ಹೆಣ್ಣು ಕೀಟ ಹೊರಬರುವುದನ್ನೇ ಕಾಯುತ್ತಿರುತ್ತದೆ. ಹೆಣ್ಣನ್ನು ಕಂಡದ್ದೇ ಮಿಲನಕ್ರಿಯೆ ನಡೆಸಿ, ಮತ್ತಷ್ಟು ಹೆಣ್ಣುಗಳ ಹುಡುಕಿ ಹೊರಡುತ್ತದೆ. ಹೆಣ್ಣು ಹುಡುಕುತ್ತ ಹಾರುವ ಗಂಡುಗಳು ಎಷ್ಟೋ ಸಲ ಲಾರ್ವಾಗಳು ಇಳಿಬಿಟ್ಟ ಜಿಗುಟು ಎಳೆಗೆ ಸಿಲುಕಿ ಸಾಯುವುದೂ ಇದೆ. ಮಿಲನದ ಬಳಿಕ ಮೂರ್ನಾಲ್ಕು ದಿನಗಳಲ್ಲಿ ಫಲಿತ ಮೊಟ್ಟೆಗಳನ್ನಿಟ್ಟು ಹೆಣ್ಣು ಸಾಯುತ್ತದೆ.

ಬೆಳಕಿನ ಹುಳದ ಲಾರ್ವಾಗಳಷ್ಟೆ ಬೆಳಕು ಬೀರುವುದು. ನಂತರ ಕೋಶ ಕಟ್ಟಿ, ಕೀಟವಾದ ಅವಸ್ಥೆಯಲ್ಲಿ ಬೆಳಕೂ ಇಲ್ಲ, ಬಾಯಿಯೂ ಇಲ್ಲ.

ನೆಲದಾಳದ ಗುಹೆಯ ಸೌಂದರ್ಯ, ನಿಶ್ಶಬ್ದ, ಕತ್ತಲು, ನೀರು, ಉಗಮದ ಕತೆ ಮತ್ತೆಲ್ಲದರ ಜೊತೆಗೆ ಥಟ್ಟನೆ ಪ್ರತ್ಯಕ್ಷವಾಗುವ ಬೆಳಕು– ಇಡಿಯ ಪ್ರವಾಸದಲ್ಲಿ ದೊರೆತ ವಿಶಿಷ್ಟ ಅನುಭವ ಸ್ಮರಣಿಕೆಯಂತೆ ಭಾಸವಾಗುತ್ತವೆ. ನೆನಪಿಗೆ ಒಂದೂ ಫೋಟೊ ತೆಗೆದುಕೊಳ್ಳಲು ಸಾಧ್ಯವಾಗದಿದ್ದರೇನು, ಆ ಇಡಿಯ ಗುಹಾ ದೃಶ್ಯ ಇಂದಿಗೂ ನಮ್ಮ ನೆನಪಿನ ಕೋಶಗಳಲ್ಲಿ ಭದ್ರವಾಗಿವೆ.

ಪ್ರಕೃತಿ ಎಂದರೆ ಅನಂತ ವಿಸ್ಮಯ. ಪ್ರಶ್ನೆಗಳೇ ಇರದ ಉತ್ತರ. ಅರಿತಷ್ಟೂ ನಿಗೂಢ. ಕಲಿತಷ್ಟೂ ಮುಗಿಯದ ಪಾಠ. ಅಲ್ಲವೇ? ■